

ಕುಸಿದುಬಿದ್ದ ತನ್ನ ಸಹೋದ್ಯೋಗಿಯನ್ನು ಆಸ್ಪತ್ರೆಗೆ ತೆಗೆದುಕೊಂಡು ಹೋಗುತ್ತಿರುವ ಪೊಲೀಸ್ ಸಿಬ್ಬಂದಿ

# ಮತ್ತೆ ಮತ್ತೆ ಕಾಲಕೂಟ ಕಲಿಯಲಾರೆವೆ ಪಾಠ?

ಅಮೃತದ ಹಂಬಲದಲ್ಲಿ ನಡೆದ ಸಮುದ್ರಮಂಥನದಲ್ಲಿ ಕಾಲಕೂಟ ಜನಿಸಿದ್ದು ಪುರಾಣಕಥೆ. ಆಧುನಿಕ ಸಂದರ್ಭದಲ್ಲಿ ಅಮೃತದ ಬಟ್ಟಲು ಹಿಡಿದ ಮೋಹಿನಿಯರ ಕನಸುಗಳನ್ನು ಬಿತ್ತುತ್ತಾ ಚಾಲ್ತಿಯಲ್ಲಿರುವ ಕೈಗಾರಿಕಾ ಮಂಥನಗಳಲ್ಲಿ ಕೊಂಚ ಯಡವಟ್ಟಾದರೂ ವಿಷ ದಶದಿಕ್ಕುಗಳಲ್ಲೂ ಆವರಿಸಿಕೊಳ್ಳುತ್ತದೆ ಎನ್ನುವುದಕ್ಕೆ ಅಂದಿನ ಭೋಪಾಲ ಹಾಗೂ ಇಂದಿನ ವಿಶಾಖಪಟ್ಟಣಗಳು ಉದಾಹರಣೆಯಾಗಿವೆ. ಸಂಭವಿಸಿದ ದುರ್ಘಟನೆ ಹಾಗೂ ಸಾವುನೋವುಗಳ ಮಟ್ಟಿಗೆ ಈ ಎರಡೂ ಉದಾಹರಣೆಗಳಲ್ಲಿ ಸಾಮ್ಯತೆ ಕಾಣಿಸುತ್ತಿರುವುದು ಮಾತ್ರವಲ್ಲ, ಭೋಪಾಲ ದುರಂತದ ನಂತರ ನಡೆದ ತಿಪ್ಪೇ ಸಾರಿಸುವ ಘಟನೆಗಳು ವಿಶಾಖಪಟ್ಟಣದ ಸಂದರ್ಭದಲ್ಲೂ ಮರುಕಳಿಸುವ ಸಾಧ್ಯತೆಗಳು ಕಾಣಿಸುತ್ತಿವೆ. ಸ್ವಾತಂತ್ರ್ಯಾನಂತರದ ಭಾರತದಲ್ಲಿ ನಡೆದ ಯಾವ ಕೈಗಾರಿಕಾ ಅವಘಡಗಳಿಂದಲೂ ನಮ್ಮ ಕಣ್ಣುಮೆದುಳುಹೃದಯಗಳಿಗೆ ಕವಿದ ಪೊರೆ ತಿಳಿಯಾದಂತಿಲ್ಲ. ವರ್ತಮಾನದ ತಕ್ಕಡಿಯಲ್ಲಿ ಮಾನವೀಯತೆ ಮತ್ತು ಬಂಡವಾಳದ ಬಟ್ಟಲುಗಳಲ್ಲಿ ಯಾವಾಗಲೂ ಮಾನವೀಯತೆಯೇ ಹಗುರವೆಂದು ಕಾಣಿಸುತ್ತಿದೆ. ಇದು ವಿಷದ ವಿತರಣೆಯ ಕರ್ಮಕಾಂಡದ ಕಥನ.

ನಾಗೇಶ ಹೆಗಡೆ